ಎಂದು ಹೇಳಿದ್ದೆ. ತಾವು ಅದನ್ನು ಮರೆತು ನಮ್ಮ ಮೇಲೆ ಬಿದ್ದರೆ ನಾವು ಏನು ಮಾಡಬೇಕು ಸ್ವಾಮಿ? ಇದು ರಾಜ್ಯಕ್ಕೆ ಸಂಬಂಧಪಟ್ಟಿದ್ದು. ತಾವು ಮಾತನಾಡಲು ಒಪ್ಪಿಗೆಯನ್ನು ಕೊಡಬೇಕು.

ಉಪಾಧ್ಯಕ್ಷರು : ನಾಳೆಯ ದಿವಸ ಶೂನ್ಯ ವೇಳೆಯಲ್ಲಿ ಮೊದಲು ತಮಗೆ ಅವಕಾಶ ಮಾಡಿಕೊಡುತ್ತೇನೆ.

ಶಾಸನ ರಚನೆ

ಕರ್ನಾಟಕ ಸಿನಿಮಾಗಳ (ನಿಯಂತ್ರಣ) (ತಿದ್ದುಪಡಿ) ವಿಧೇಯಕ, 1997 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮುಖ್ಯ ಮಂತ್ರಿಗಳ ಪರವಾಗಿ : ಮಾನ್ಯ ಉಪಾಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1997ನೇ ಸಾಲಿನ ಕರ್ನಾಟಕ ಸಿನಿಮಾಗಳ (ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

+ಶ್ರೀ ಎಂ.ಸಿ. ನಾಣಯ್ಯ : ಉಪಾಧ್ಯಕ್ಷರೇ, ಇದು ಒಂದು ಬಹಳ ಚಿಕ್ಕದಾದ ತಿದ್ದುಪಡಿ. ಕರ್ನಾಟಕ ಸಿನಿಮಾ ರೆಗ್ಯುಲೇಷನ್ ಅಮೆಂಡ್‌ಮೆಂಟ್ ಆಗಿದೆ. ಈಗಿರತಕ್ಕಂಥ ನಮ್ಮ ಕಾನೂನಿನಲ್ಲಿ ಈ ಸಿನಿಮಾ ಮಂದಿರಗಳು ಸರ್ಕಾರಕ್ಕೆ ಕೊಡಬೇಕಾಗಿರತಕ್ಕಂಥ ಯಾವುದಾದರೂ ತೆರಿಗೆಗಳು, ಮನರಂಜನೆ ತೆರಿಗೆ ಕೊಡಲು ಬಾಕಿ ಇದ್ದರೆ ಅವರ ಮೇಲೆ ನಮಗೆ ಪ್ರಾಸಿಕ್ಯೂಷನ್ ಮಾಡತಕ್ಕಂಥ ಅಧಿಕಾರ ಮಾತ್ರ ಇದೆ. ಅಂತಹ ಒಂದು ಬಾಕಿ ಇದ್ದರೆ, ಆ ಲೈಸನ್ಸನ್ನು ರದ್ದು ಮಾಡತಕ್ಕಂಥದ್ದು, ಲೈಸನ್ಸನ್ನು ನವೀಕರಣ ಮಾಡತಕ್ಕಂಥ ಯಾವುದೇ ಅವಕಾಶ ಇಲ್ಲ. ಆದ್ದರಿಂದ ಈ ಹಿಂದೆ ನಾವು ಸಿನಿಮಾ ಮಂದಿರದವರು ಮನರಂಜನೆ ತೆರಿಗೆಗಳು ಕೊಡಲಿಲ್ಲವೆಂದು ಹೇಳಿ ಅವರ ಲೈಸನ್ಸ್ ನಾವು ನವೀಕರಿಸಲಿಲ್ಲ. ಅದಕ್ಕೆ ಸಂಬಂಧಪಟ್ಟ ಹಾಗೆ ಅವರು ಉಚ್ಚನ್ಯಾಯಾಲಯದಲ್ಲಿ ಒಂದು ರಿಟ್ ಅರ್ಜಿಯನ್ನು ಹಾಕಿದರು. ಆ ರಿಟ್ ಅರ್ಜಿಯನ್ನು ಇತ್ಯರ್ಥ ಮಾಡುವ ಸಂದರ್ಭದಲ್ಲಿ ಉಚ್ಚನ್ಯಾಯಾಲಯವು ಹೇಳಿತು, ನಿಮ್ಮ ಕಾನೂನಿನಲ್ಲಿ ಅವರು ಮನರಂಜನೆ ತೆರಿಗೆಯನ್ನು ಕೊಡುವುದು ಬಾಕಿ ಇದ್ದರೆ ಅದನ್ನು ರದ್ದುಪಡಿಸಲು ಮತ್ತು ನವೀಕರಣವನ್ನು ಮಾಡದೇ ಇರಲು ಅವಕಾಶ ಇಲ್ಲ. ಆದ್ದರಿಂದ ಆ ರಿಟ್ ಅರ್ಜಿಯನ್ನು ಪುರಸ್ಕರಿಸಿ ನಾವು ತೆಗೆದುಕೊಂಡಿರತಕ್ಕಂಥ ತೀರ್ಮಾನವನ್ನು ಅವರು ರದ್ದು ಮಾಡಿದರು. ಅದಕ್ಕೆ ಸಂಬಂಧಪಟ್ಟ, ಹಾಗೆ, ನಾವು ಈ ಒಂದು ತಿದ್ದುಪಡಿಯನ್ನು ತರಬೇಕಾಗುತ್ತದೆ. ಎರಡನೆಯದಾಗಿ, ಇವತ್ತು ಸಿನಿಮಾ ಮಂದಿರಗಳು ಯಾವ ರೀತಿಯಾಗಿ ಇವೆ ತಮಗೆ ಗೊತ್ತಿದೆ. ಬಹಳ ಜನರು ಸಿನಿಮಾಕ್ಕೆ ಹೋಗುತ್ತಾ ಇಲ್ಲ. ಒಳ್ಳೆಯ ಸಿನಿಮಾ ಬಂದರೆ ಹೋಗುತ್ತಾರೆ. ಸಿನಿಮಾ ಮಂದಿರಗಳಲ್ಲಿ ಆಸನಗಳು ಸರಿಯಾಗಿ ಇರುವುದಿಲ್ಲ. ಲೈಸನ್ಸ್ ಕೊಟ್ಟಂತೆ

ಯಾವುದು ಕೂಡ ಅವರು ಜಾರಿಗೆ ತರುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಏರ್ ಕಂಡಿಷನ್ ಇರುವುದಿಲ್ಲ. ಕೆಲವು ಕಡೆ ಶೌಚಾಲಯಗಳು ಇರುವುದಿಲ್ಲ. ಆದರೂ ಇಂತಹ ಸಂದರ್ಭಗಳಲ್ಲಿ ಅಂತಹ ಸಿನಿಮಾ ಮಂದಿರಗಳ ಲೈಸನ್ಸನ್ನು ರದ್ದು ಮಾಡಿದಲ್ಲಿ ಇರತಕ್ಕಂಥ ಅವಕಾಶ ಇವತ್ತು ಈ ನಮ್ಮ ವಿಧೇಯಕದಲ್ಲಿ ಇಲ್ಲ. ಆದ್ದರಿಂದ ಆ ಒಂದು ತಿದ್ದುಪಡಿಯನ್ನು ತಂದು ಆ ಸಂದರ್ಭಗಳಲ್ಲಿ ಸಿನಿಮಾ ಮಂದಿರಗಳ ಲೈಸನ್ಸನ್ನು ರದ್ದು ಮಾಡಲಿಕ್ಕೆ ಅಥವಾ ಅಮಾನತ್ತುನಲ್ಲಿಡಲು ಈ ವಿಧೇಯಕಕ್ಕೆ ನಾವು ತಿದ್ದುಪಡಿಯನ್ನು ತರಬೇಕೆಂದು ಸೂಚಿಸಿದ್ದೇವೆ. ಇದು ಬಹಳ ಸರಳವಾದಂಥ; ತಿದ್ದುಪಡಿ ನಮ್ಮ ಸದಸ್ಯರೆಲ್ಲರೂ ಸಿನಿಮಾ ಮಂದಿರಗಳ ಪರಿಸ್ಥಿತಿಯನ್ನು ನೋಡಿದಾಗ ಅವರು ಕೆಲವೊಂದು ಸಲಹೆಗಳನ್ನು ಕೊಟ್ಟರು. ನೀವು ಲೈಸನ್ಸನ್ನು ರದ್ದು ಮಾಡಬೇಕಾಗುತ್ತದೆಂದು, ಆದ್ದರಿಂದ ಸಹಕಾರ ಕೊಟ್ಟು ಸರ್ವಸಮ್ಮತದಿಂದ ಮಂಜೂರಾತಿಯನ್ನು ಮಾಡಿ ಕೊಡಿ.

+ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ) : ಉಪಾಧ್ಯಕ್ಷರೆ, ಈ ತಿದ್ದುಪಡಿ ಬಗ್ಗೆ ನಮಗೆ ಏನೂ ಆಕ್ಷೇಪಣೆ ಇಲ್ಲ. ಏಕೆಂದರೆ, ಸರ್ಕಾರಕ್ಕೆ ಬರತಕ್ಕಂಥ ಕಂದಾಯ ವಸೂಲಿ ಮಾಡಲು ತಾವು ಕಟ್ಟುನಿಟ್ಟಿನ ನಿರ್ಣಯ ತೆಗೆದುಕೊಳ್ಳಬೇಕು. ನವೀಕರಣ ಮಾಡತಕ್ಕಂಥದ್ದು ಮತ್ತು ಅದನ್ನು ತಿರಸ್ಕಾರ ಮಾಡತಕ್ಕಂಥದ್ದು ಉಚ್ಚನ್ಯಾಯಾಲಯದ ಪ್ರಕಾರ ತಾವು ಮಾಡಬೇಕು. ಮುಖ್ಯವಾಗಿ ತಾವು ಸಬ್ಸಿಡಿ ಬಗ್ಗೆ ಏನು ಹೇಳಿದಿರಿ, ಕ್ವಾಲಿಟಿ ಟ್ಯಾಗ್ ಯಾವುದು, ಕ್ವಾಲಿಟಿ ಟ್ಯಾಗ್ ಯಾವರೀತಿ ಇದೆ ತಮಗೆ ಗೊತ್ತಿದೆ. ಕ್ವಾಲಿಟಿ ಬಗ್ಗೆ ನೀವು ಅಥವಾ ನಿಮ್ಮ ಸಚಿವರಾಗಲಿ, ಅಥವಾ ಅಧಿಕಾರಿಗಳು ಆಗಲಿ ದಿನಾಲು ಸಿನಿಮಾ ನೋಡುತ್ತಿರಬೇಕು. ಪ್ರತಿದಿನ ಅವರು ಸಿನಿಮಾವನ್ನು ನೋಡುತ್ತಿರಬೇಕು. ಆ ಸಿನಿಮಾ ನೋಡಬೇಕು, ಯಾವ ಕ್ವಾಲಿಟಿ ಯಾವ ರೀತಿಯಾಗಿ ಇರುತ್ತದೆಂದು, ಅದು ಯಾವ ರೀತಿಯಾಗಿ ನಿರ್ಧಾರವಾಗುತ್ತದೆ, ಅದನ್ನು ಆಕ್ಷೇಪಣೆ ಮಾಡುವುದಕ್ಕೆ ಬರುವುದಿಲ್ಲ. ಇನ್ನೊಂದು ವಿಷಯವನ್ನು ಹೇಳಬೇಕೆಂದರೆ; ಆ ಎಲ್ಲಾ ಸಬ್ಸಿಡಿ ಇವತ್ತು ನಿಂತು ಹೋಗಿದೆ. ಒಳ್ಳೆಯ ಸಿನಿಮಾಗಳು ಇವತ್ತು ಬರುತ್ತಿವೆ. ಮೊನ್ನೆ ತಾನೆ ಬಿಡುಗಡೆಯಾದ ಕನ್ನಡ ಚಿತ್ರ "ತಾಯಿಸಾಹೇಬ" ಬಹಳ ಒಳ್ಳೆಯ ಸಿನಿಮಾ ಆದರೂ ಕೂಡ ಇವತ್ತು ಅದು ಮುಗ್ಗರಿಸುವ ಪರಿಸ್ಥಿತಿ ಬರುತ್ತಿದೆ. ಆದ್ದರಿಂದ ತಾವು ಅದರ ಬಗ್ಗೆ ಸಬ್ಸಿಡಿಗಾಗಿ ಕ್ವಾಲಿಟಿ ಟ್ಯಾಗ್ ಏನು ನಿರ್ಣಯ ಮಾಡಿದ್ದೀರಿ ಅದು ಸರಿಯಿಲ್ಲ. ಆದರೆ ಸಬ್ಸಿಡಿ ಬಗ್ಗೆ ಮೊದಲಿನಿಂದ ಏನು ನೀತಿ ಬಂದಿದೆ ಅದರ ಬಗ್ಗೆ ಏನಾದರೂ ಸ್ವಲ್ಪ ಹೆಚ್ಚು ಕಡಿಮೆ ತಾವು ಮಾಡಬಹುದು. ನೀವು ಅದರ ಬಗ್ಗೆ ಕೂಡಲೇ ನಿರ್ದಿಷ್ಟವಾಗಿ ಸಬ್ಸಿಡಿ ಧೋರಣೆ ಬಗ್ಗೆ ನೀವು ಸ್ಪಷ್ಟವಾಗಿ ಹೇಳದೇ ಇದ್ದರೆ, ಕನ್ನಡ ಚಿತ್ರರಂಗದ ಕ್ಷೇತ್ರಕ್ಕೆ ಇದರಿಂದ ಬಹಳ ಆಘಾತವಾಗುತ್ತದೆ. ಇದರಿಂದ ಕುಸಿಯುತ್ತದೆ. ಇಲ್ಲಿಯವರೆಗೆ ಏನು ನೀತಿ ಇತ್ತು, ಆ ನಿರ್ಣಯದ ನೀತಿಯ ಪ್ರಕಾರ ಸಬ್ಸಿಡಿಯನ್ನು ತಕ್ಷಣ ಬಿಡುಗಡೆ ಮಾಡಬೇಕು. ಎರಡನೆಯದಾಗಿ ನೀವು ಮುಂದೆ ಏನು ಮಾಡುತ್ತೀರಿ, ನಮ್ಮ ಶಾಸಕರಾದ ವಾಟಾಳ್ ನಾಗರಾಜ್‌ರವರನ್ನು ಮತ್ತು ನಮ್ಮ ನಾಯಕರನ್ನು ಕರೆಯಿಸಿ, ಸಿನಿಮಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಪರಿಣಿತರನ್ನು ಕರೆಯಿಸಿ ನೀವು ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕು. ಸರ್ಕಾರ ಅಥವಾ ಅಧಿಕಾರಿಗಳು ತಮಗೆ ಹೇಳಿದರು ಎಂದು ಹೇಳಿ, ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಹೋಗಿ ಸಿನಿಮಾ ಕ್ಷೇತ್ರಕ್ಕೆ ತೊಂದರೆ ಆಗತಕ್ಕಂಥ ಕೆಲಸವನ್ನು ದಯಮಾಡಿ ತಾವು ಮಾಡಬೇಡಿ. ಈ

ಮಸೂದೆಗೆ ಸಂಬಂಧಪಟ್ಟದ್ದು ಇಲ್ಲದಿದ್ದರೂ ಕೂಡ ತಾವು ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಆಗಿರುವುದರಿಂದ ಈ ಬಗ್ಗೆ ಜರೂರಾಗಿ ಕ್ರಮವನ್ನು ಒಂದು ವಾರದೊಳಗಾಗಿ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಈ ತಿದ್ದುಪಡಿಯನ್ನು ನಾವು ವಿರೋಧ ಮಾಡುವುದಕ್ಕೆ ಹೋಗುವುದಿಲ್ಲ. ಕೆಲವು ಸಲಹೆಗಳನ್ನು ನಾವು ಸರ್ಕಾರಕ್ಕೆ ಕೊಡಬೇಕಾಗುತ್ತದೆ. ಚಿತ್ರಮಂದಿರಗಳ ವ್ಯವಸ್ಥೆ ಏನು ಇದೆ, ಇದನ್ನು ನಾವು ಪ್ರಾಮಾಣಿಕವಾಗಿ ನೋಡಬೇಕು. ಈಗಾಗಲೇ ಮಾನ್ಯ ಸಚಿವರು ಹೇಳಿದ ರೀತಿಯಲ್ಲಿ ಹವಾನಿಯಂತ್ರಣ ಇರುವುದಿಲ್ಲ. ಅಲ್ಲಿ ಕುಳಿತುಕೊಳ್ಳಲು ಪೀಠೋಪಕರಣಗಳು ಚೆನ್ನಾಗಿ ಇರುವುದಿಲ್ಲ. ಅಲ್ಲಿ ಹೋಟೆಲ್ ಚೆನ್ನಾಗಿ ಇರುವುದಿಲ್ಲ. ಸೈಕಲ್ ನಿಲ್ಲಿಸುವ ವ್ಯವಸ್ಥೆ ಸರಿಯಾಗಿ ಇರುವುದಿಲ್ಲ. ಸಿನಿಮಾ ಮಂದಿರದಲ್ಲಿ ಎರಡೂವರೆ ತಾಸು ಕುಳಿತು ಚಿತ್ರವನ್ನು ನೋಡಬೇಕಾದರೆ, ಒಬ್ಬ ವ್ಯಕ್ತಿ ಪ್ರವೇಶದರವನ್ನು ಕೊಟ್ಟು ಒಳಗಡೆ ಕುಳಿತುಕೊಂಡರೆ ಅವನು ಚೆನ್ನಾಗಿ ಮನಸ್ಸನ್ನು ಇಟ್ಟು ನೋಡಬೇಕು. ಹೆಚ್ಚಾಗಿ ಗಾಳಿ ಬೆಳಕು ಇಲ್ಲದಿರುವುದರಿಂದ, ಹವಾನಿಯಂತ್ರಣ ಇಲ್ಲದಿರುವುದರಿಂದ ನೋಡುವದಕ್ಕೆ ಆಗುತ್ತಿಲ್ಲ. ಮತ್ತೊಂದು ಕಡೆ ಮೂತ್ರವಿಸರ್ಜನೆ ಕೂಡ ಸರಿಯಾಗಿ ಇರುವುದಿಲ್ಲ. ಸೈಕಲ್ ನಿಲ್ಲಿಸಿದರೆ ಅಲ್ಲಿ ಕಳ್ಳತನವಾಗುತ್ತದೆ. ಇಷ್ಟೆಲ್ಲಾ ಇದ್ದರೂ ಕಣ್ಣಿಗೆ ಕಾಣುವ ಪರದೆ ಅಪಾಯದಿಂದ ಇರುತ್ತದೆ. ಆ ಬಿಳಿ ಪರದೆ ಇವತ್ತು ಸರಿಯಾದ ರೀತಿಯಲ್ಲಿ ವೈಜ್ಞಾನಿಕವಾದಂಥ ಪರದೆಗಳು ಇಲ್ಲ. ನಾನು ಪ್ರವೇಶದರದ ಬಗ್ಗೆ ತಮಗೆ ಹೇಳುತ್ತೇನೆ. ಇವತ್ತು ಕನಿಷ್ಠ ಪಕ್ಷ 20 ರೂಪಾಯಿಗಳಿಂದ 50 ರೂಪಾಯಿಗಳು ಆಗಿದೆ. ಚಲನಚಿತ್ರಕ್ಕೆ ಹೋಗತಕ್ಕಂಥವರು ಎಲ್ಲರೂ ಶ್ರೀಮಂತರು ಇರುವುದಿಲ್ಲ.. ಬರೀ ಶ್ರೀಮಂತರೇ ಹೋಗುವುದಿಲ್ಲ. 100ಕ್ಕೆ 90 ಭಾಗ ಈ ಮನರಂಜನೆಯನ್ನು ನೋಡತಕ್ಕಂಥವರು ಸಾಮಾನ್ಯ ಜನರು ಹೋಗುತ್ತಾರೆ. ಸಾಮಾನ್ಯವಾಗಿ ಒಂದು ಪ್ರವೇಶದರವನ್ನು ನಿಗದಿ ಮಾಡಬೇಕು. ಇವತ್ತಿನ ಕಾಲಕ್ಕೆ ಸಾಮಾನ್ಯ ಜನರ ನೀತಿಗೆ ಹೊಂದಿಕೊಳ್ಳತಕ್ಕಂಥ ಪ್ರವೇಶದರವನ್ನು ನಾವು ಹಾಕಬೇಕಾದ್ದು ಕರ್ತವ್ಯ. ಆ ರೀತಿ ಹೋಗದಿದ್ದರೆ ಅಪಾಯ ಒದಗುತ್ತದೆ. ಇದರ ಜೊತೆಗೆ ನಮ್ಮ ಕರ್ತವ್ಯ ಮತ್ತು ಸರ್ಕಾರದ ನೀತಿ ಹಿಂದೆ ಇತ್ತು. ನಾನು ಮಾನ್ಯ ಉಪ ಮುಖ್ಯಮಂತ್ರಿಗಳ ಗಮನಕ್ಕೂ ಕೂಡ ಇದನ್ನು ತರುತ್ತೇನೆ. ಕಡ್ಡಾಯವಾಗಿ ಮೂರು ತಿಂಗಳ ಕಾಲ ಆ ಕನ್ನಡ ಚಿತ್ರಗಳನ್ನು ಪ್ರದರ್ಶನ ಮಾಡಬೇಕೆಂದು ಇತ್ತು. ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಕನ್ನಡ ಚಿತ್ರಗಳನ್ನು ಕಡ್ಡಾಯ ಮೂರು ತಿಂಗಳು ಪ್ರದರ್ಶನ ಎಂದು ಇತ್ತು. ಇವತ್ತು ಅದನ್ನು ಎಲ್ಲಾ ಗಾಳಿಗೆ ತೂರಿದ್ದಾರೆ. ಬೆಂಗಳೂರಿನಲ್ಲಿ ತಮಿಳು ಚಿತ್ರಗಳು ನಡೆಯುತ್ತವೆ. ತೆಲುಗು, ಮಲೆಯಾಳಂ, ಗುಜರಾತಿ, ಹಿಂದಿ ಎಲ್ಲಾ ಚಿತ್ರಗಳು ನಡೆಯುತ್ತವೆ. ಆ ಚಿತ್ರಗಳು ಶತದಿನೋತ್ಸವವನ್ನು ಬೆಂಗಳೂರಿನಲ್ಲಿ ಆಚರಣೆ ಮಾಡುತ್ತವೆ. ಆಂಧ್ರದಲ್ಲಿ ಇಲ್ಲ, ಮಹಾರಾಷ್ಟ್ರದಲ್ಲಿ ಇಲ್ಲ, ಕೇರಳಾದಲ್ಲಿ ಇಲ್ಲ ಆ ಎಲ್ಲಾ ಚಿತ್ರಗಳು ಇವತ್ತು ಕರ್ನಾಟಕದಲ್ಲಿ ಶತದಿನೋತ್ಸವ ಆಚರಣೆ ಮಾಡುತ್ತವೆ. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಕೇರಳದಲ್ಲಿ ಕನ್ನಡ ಚಿತ್ರಗಳ ಪ್ರದರ್ಶನ ಇಲ್ಲ, ಆಂಧ್ರದಲ್ಲಿ, ಮಹಾರಾಷ್ಟ್ರದಲ್ಲಿ ಕನ್ನಡ ಚಿತ್ರಗಳ ಪ್ರದರ್ಶನ ನಡೆಯುತ್ತಿಲ್ಲ. ಆದರೆ ಕರ್ನಾಟಕದಲ್ಲಿ ಪರಭಾಷೆಯ ಚಿತ್ರಗಳು ನಡೆಯುವುದು ಒಂದು ಅವಹೇಳನಕಾರಿಯಾಗಿ ನಡೆಯುತ್ತವೆ. ನಾನು ಮಾನ್ಯ ಸಚಿವರನ್ನು ಅತ್ಯಂತ

ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ. ಆ ಸರ್ಕಾರಗಳಿಗೆ ತಾವು ಹೇಳಬೇಕು. ನಿಮ್ಮ ಸರ್ಕಾರಗಳು ನಿಮ್ಮ ರಾಜ್ಯದಲ್ಲಿ ಕಡ್ಡಾಯವಾಗಿ ಕನಿಷ್ಠ ಮೂರು ತಿಂಗಳ ಕಾಲವಾದರೂ ಕನ್ನಡ ಚಿತ್ರಗಳನ್ನು ಪ್ರದರ್ಶನ ಮಾಡಬೇಕು. ತಾವು ಕಡ್ಡಾಯವಾಗಿ ನಡೆಸಲಿಲ್ಲವೆಂದರೆ ಕರ್ನಾಟಕದಲ್ಲಿ ನಾವು ಪರಭಾಷೆಯ ಚಿತ್ರಗಳನ್ನು ಬಹಿಷ್ಕಾರ ಹಾಕುತ್ತೇವೆ. ನಾವು ಸರ್ಕಾರದ ಮಟ್ಟದಲ್ಲಿ ಕಾನೂನನ್ನು ತರುತ್ತೇವೆ. ತಾವು ಒಂದು ಕಾನೂನನ್ನು ತರುತ್ತೇವೆ ಎನ್ನುವ ಮಾತನ್ನು ಹೇಳಿದರೆ ಸ್ವಲ್ಪ ಅಲ್ಲಿಗೆ ಒಂದು ರೀತಿಯಾದ ಚೈತನ್ಯ ಕನ್ನಡ ಚಲನಚಿತ್ರಗಳಿಗೆ ಬರುತ್ತದೆಂದು ಹೇಳುತ್ತೇನೆ. ಕೊನೆಯದಾಗಿ ನಾನು ಏನು ಹೇಳುತ್ತಿದ್ದೇನೆಂದರೆ ಇದಕ್ಕೆ ಸಹಾಯಧನದ ಬಗ್ಗೆ ಸಂಬಂಧ ಇಲ್ಲದೆ ಇದ್ದರೂ ಅದು ಆರಂಭವಾದ ಉದ್ದೇಶ ಏನು? ತಮಿಳುನಾಡಿನಲ್ಲಿದ್ದಂಥ ಮತ್ತು ಮದ್ರಾಸಿನಲ್ಲಿದ್ದಂಥ ಕನ್ನಡ ಚಿತ್ರರಂಗ ನಮ್ಮ ಕರ್ನಾಟಕಕ್ಕೆ ಬಂದು ಇಲ್ಲಿ ಕನ್ನಡ ಚಲನಚಿತ್ರಗಳ ಬೆಳವಣಿಗೆ ಬೆಳೆದು ಇದಕ್ಕೆ ಹೊಸ ಆಯಾಮ ಬರಬೇಕೆಂದು ಒಂದು ಕಡೆ ಕಂಠೀರವ ಸ್ಟುಡಿಯೋ ಕನ್ನಡ ಚಿತ್ರ ನಗರಿ ಮಾಡಬೇಕೆಂದು ಹೇಳಿ ಇದಕ್ಕೆ ಅನೇಕ ವಿಧವಾದ ಯೋಜನೆಗಳನ್ನು ಹಾಕಿದ್ದು. ಮಾನ್ಯ ನಾಣ್ಯಯ್ಯನವರು ಸಂಸದೀಯ ಸಚಿವರು, ಸಂಬಂಧಪಟ್ಟ ಸಚಿವರು, ಅವರು ಬಹಳ ತೀವ್ರವಾಗಿ ಯೋಚಿಸಬೇಕು. ಒಂದು ಕಡೆ ಕಂಠೀರವ ಸ್ಟುಡಿಯೋಕ್ಕೆ ಅಪಾರವಾದ ಜಾಗ ಮಾಡಿ ಕಟ್ಟಿದವರು ಇದ್ದಾರೆ. ಆ ಸ್ಟುಡಿಯೋವನ್ನು ಇವತ್ತು ಖಾಸಗಿಯವರು ಕಬಳಿಸಬೇಕೆಂದು ಒಂದು ಕಡೆ ಹೊರಟಿದ್ದಾರೆ. ಮತ್ತೊಂದು ಕಡೆ ಚಿತ್ರನಗರಿಗೆ ಇಟ್ಟಿರತಕ್ಕ ಜಾಗ ಅದು ದಿಕ್ಕೆಟ್ಟು ಅದನ್ನು ಯಾರು ಯಾರೋ ಕಬಳಿಸಬೇಕೆಂದು ಹೊರಟಿದ್ದಾರೆ. ಇನ್ನೊಂದು ಕಡೆ ಒರಿಸ್ಸಾ ನರ್ತಕಿಗೆ ಕೊಟ್ಟಿರುವುದು; ಆ ನರ್ತಕಿ ಅದನ್ನು ತೆಗೆದುಕೊಂಡು, ತಾನು ಅದನ್ನು ಬೇರೆಯವರಿಗೆ ಸಬ್‌ಲೀಸ್ ಮಾಡತಕ್ಕ ಕೆಲಸಕ್ಕೆ ಹೊರಟು ಅಲ್ಲಿ ಒಂದು ಹೋಟೆಲ್ ಬರತಕ್ಕ ವ್ಯವಸ್ಥೆ ಇದೆ. ಈ ಸಂದರ್ಭದಲ್ಲಿ ಏತಕ್ಕೆ ಈ ಮಾತು ಹೇಳುತ್ತಿದ್ದೇನೆಂದರೆ, ಸರ್ಕಾರದ ಗಮನಕ್ಕೆ ಇದು ಬರಲಿ ಎಂದು. ಆ ದೃಷ್ಟಿಯಿಂದ ಕನ್ನಡ ಚಿತ್ರಗಳಿಗೆ ಸಹಾಯಧನವನ್ನು ನಿಲ್ಲಿಸತಕ್ಕ ನೀತಿ ಏನಿದೆ ಅದು ಕನ್ನಡ ಚಿತ್ರಗಳಿಗೆ ಕೊಡಲಿಪೆಟ್ಟು ಹಾಕಿದಂತಾಗುತ್ತದೆ. ಆ ದೃಷ್ಟಿಯಿಂದ ಸಹಾಯಧನ ನಿಲ್ಲಿಸತಕ್ಕ ಗೋಜಿಗೆ ಹೋಗಬಾರದು. ಅವರು ಕೊಡಬೇಕಾದ ಕನಿಷ್ಠ ಸಹಾಯಧನ 7 ಕೋಟಿ ರೂಪಾಯಿ ಕರ್ನಾಟಕ ಸರ್ಕಾರದಿಂದ ಕನ್ನಡ ಚಲನ ಚಿತ್ರಗಳಿಗೆ ಹೋಗಬೇಕಾಗಿದೆ. ಕಳೆದ 3 ವರ್ಷಗಳಿಂದ ಅವರಿಗೆ ಹಣ ಕೊಟ್ಟಿಲ್ಲ. ಅದರ ಬಗ್ಗೆ ಸರ್ಕಾರ ಸ್ಪಷ್ಟಪಡಿಸಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಂಡು ಈ ತಿದ್ದುಪಡಿಗೆ ಬೆಂಬಲ ಕೊಡುತ್ತೇನೆ.

+ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ಮಾನ್ಯ ಉಪಾಧ್ಯಕ್ಷರೆ, ನೀವು ತಂದಿರತಕ್ಕ ತಿದ್ದುಪಡಿ ಮಸೂದೆ ಬಗ್ಗೆ ನನ್ನ ಆಕ್ಷೇಪಣೆ ಇಲ್ಲ. ಆದರೆ ಸಮಗ್ರವಾದ ತಿದ್ದುಪಡಿಯನ್ನು ತಂದಿದ್ದರೆ ಒಳ್ಳೆಯದಾಗುತ್ತಿತ್ತು. ಈಗ ಥಿಯೇಟರ್‌ನವರು ಏನು ಮಾಡುತ್ತಿದ್ದಾರೆಂದರೆ, ಒಂದು ಕಡೆ ನೋ ಅಬ್‌ಜಕ್ಷನ್ ಸರ್ಟಿಫಿಕೇಟ್ ತೆಗೆದುಕೊಳ್ಳುತ್ತಾರೆ. ತೆಗೆದುಕೊಂಡನಂತರ ಬೇರೆ ಕಡೆಗೆ ಷಿಫ್ಟ್ ಮಾಡುತ್ತಾರೆ. ಷಿಫ್ಟ್ ಮಾಡುವಾಗ ಅಬ್‌ಜಕ್ಷನ್ ಕಾಲ್‌ಫಾರ್ ಮಾಡುತ್ತಿಲ್ಲ. ಜಿಲ್ಲಾಧಿಕಾರಿಗಳು ಅಬ್‌ಜಕ್ಷನ್ ಕರೆದು ಆಗಿದೆ ಎಂದು ಅಲ್ಲಿ ಸಾರ್ವಜನಿಕರ ಅಬ್‌ಜಕ್ಷನ್ ಇದ್ದರೂ ಕೂಡ ಅಲ್ಲಿ ಲೈಸೆನ್ಸ್ ಕೊಡತಕ್ಕ ಪರಿಪಾಠ ಇಟ್ಟುಕೊಂಡಿದ್ದಾರೆ. ಇವತ್ತು ಇದಕ್ಕೆ ಸೂಕ್ತವಾದ ಬದಲಾವಣೆ ತರದಿದ್ದರೆ

ಸಾರ್ವಜನಿಕರಿಗೆ ಅನುಕೂಲವಾಗುವುದಿಲ್ಲ. ಇದರ ಬಗ್ಗೆ ತಾವು ಗಮನ ಹರಿಸಬೇಕು. ಮತ್ತೊಂದು ವಿಷಯವೆಂದರೆ ಎಲ್ಲಾ ಟೆಂಟ್ ಥಿಯೇಟರ್‌ಗಳಲ್ಲಿ ಅಡ್ವರ್ಟೈಸ್‌ಮೆಂಟ್ ಇಲ್ಲ, ಏನೂ ಇಲ್ಲ, ಮಧ್ಯಾಹ್ನ ವಿಶ್ರಾಂತಿ ವೇಳೆ ಇಲ್ಲ. ಆ ವೇಳೆಯಲ್ಲಿ ಟೆಂಟ್ ಥಿಯೇಟರ್‌ಗಳಲ್ಲಿ ಬ್ಲೂ ಫಿಲಂ ತೋರಿಸಿ ಜನರನ್ನು ಆಕರ್ಷಣೆ ಮಾಡಿ, ಸಣ್ಣ ಸಣ್ಣ ಮಕ್ಕಳನ್ನು ಕೆಟ್ಟ ದಾರಿಗೆ ತರತಕ್ಕ ವ್ಯವಸ್ಥೆ ಟೆಂಟ್ ಥಿಯೇಟರ್‌ಗಳಲ್ಲಿ ಇವತ್ತಿಗೂ ನಡೆಯುತ್ತಿದೆ. ಅಶ್ಲೀಲ ಚಿತ್ರಗಳು ಮತ್ತು ಅಶ್ಲೀಲ ಅಡ್ವರ್ಟೈಸ್‌ಮೆಂಟ್‌ಗಳು ಇವನ್ನೆಲ್ಲಾ ಪ್ರತಿ ಥಿಯೇಟರ್‌ಗಳಲ್ಲಿ ನೋಡುತ್ತಿದ್ದೇವೆ. ಆದುದರಿಂದ ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ, ಇದರ ಬಗ್ಗೆ ಒಂದು ವಿಜಿಲೆನ್ಸ್ ಆಫೀಸನ್ನು ಸಿನೇಮಾ ಫೋಟೋಗ್ರಫಿ ಆಕ್ಟ್‌ನಲ್ಲಿ ಹಾಕಿ ಯಾರು ಯಾರು ಅಂಥವರು ಆ ರೀತಿ ಮಾಡುತ್ತಾರೆ ಅವರ ಮೇಲೆ ಕ್ರಮಕೈಗೊಳ್ಳಬೇಕು. ಇದನ್ನು ಮಾಡದಿದ್ದರೆ ಅನಾನುಕೂಲವಾಗುತ್ತದೆ. ಮಾನ್ಯ ಹಣಕಾಸಿನ ಮಂತ್ರಿಗಳು ಇದ್ದಾರೆ; ಅವರಿಗೆ ಇದೇ ಸಂದರ್ಭದಲ್ಲಿ ಒಂದು ಮಾತು ಹೇಳುವುದು ಏನೆಂದರೆ ಸಿನೇಮಾ ಫೋಟೋಗ್ರಾಫಿ ಉಪಯೋಗಿಸಿ ಸಿನೇಮಾ ಪ್ರೊಡಕ್ಷನ್ ಮಾಡುವುದು. ಇವತ್ತಿನ ದಿವಸ ನಾಟಕಗಳಲ್ಲಿ ಕೂಡ ಬೇರೆ ಬೇರೆ ಕಡೆ ಸಿನೇಮಾ ಫೋಟೋಗ್ರಾಫಿಗೆ ಉಪಯೋಗಿಸತಕ್ಕ ತಂತ್ರಗಳನ್ನು ಉಪಯೋಗ ಮಾಡತಕ್ಕ ಕಡೆ ತಾವು ಟ್ಯಾಕ್ಸ್ ಹಾಕಬೇಕು. ಸಿನೇಮಾ ಫೋಟೋಗ್ರಾಫಿಯಲ್ಲಿ ಸಿನೇಮಾ ಥಿಯೇಟರ್‌ನಲ್ಲಿ ಯಾವ ರೀತಿ ಟ್ಯಾಕ್ಸ್ ಹಾಕುತ್ತಿದ್ದಾರೆ ಅದೇ ರೀತಿ ನಾಟಕಗಳು ನಡೆಯುವ ಕಡೆ ಕೂಡ ಈ ಕ್ರಮವನ್ನು ಅನುಸರಿಸಿದಾಗ ಅಲ್ಲಿ ಕೂಡ ಟ್ಯಾಕ್ಸ್ ಹಾಕಿ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಬರುವ ಹಾಗೆ ಮಾಡಿದರೆ ಬಹಳ ಅನುಕೂಲವಾಗುತ್ತದೆ. ನಾನು ಏತಕ್ಕೆ ಈ ವಿಷಯ ಹೇಳುತ್ತಿದ್ದೇನೆಂದರೆ ಬ್ಯೂಟಿ ಪೇಜೆಂಟ್ ಆದಾಗ ಸಿನೇಮಾ ಫೋಟೋಗ್ರಾಫಿ ಆಕ್ಟ್‌ನಲ್ಲಿ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಇಲ್ಲವೆಂದು ಹೇಳಿದರು. ಸೇಲ್ಸ್ ಟ್ಯಾಕ್ಸ್ ಆಫೀಸರ್ ಕೂಡ ಟ್ಯಾಕ್ಸ್ ಇಲ್ಲವೆಂದು ಹೇಳಿದರು. ಬೇರೆ ಎಲ್ಲಾ ಕಡೆ ಟ್ಯಾಕ್ಸ್ ಇದ್ದರೂ ಕೂಡ ಕರ್ನಾಟಕದಲ್ಲಿ ಈ ಪೇಜೆಂಟ್ ಉಪಯೋಗಿಸಿಕೊಂಡು ಬೇಕುಬೇಕಾದುದಕ್ಕೆ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಆಕ್ಟ್ ಹಿಂದೆ ಅವರು ಹೋಗುವ ಪರಿಸ್ಥಿತಿ ಬಂತು. ನಮ್ಮ ಕರ್ನಾಟಕಕ್ಕೆ ಇದರಿಂದ ತುಂಬಾ ನಷ್ಟವಾಯಿತು. ಆದುದರಿಂದ ನಾನು ಕಳಕಳಿಯಿಂದ ಭಿನ್ನವಿಸಿಕೊಳ್ಳುತ್ತೇನೆ. ಇಂಥವರ ಮೇಲೆ ಟ್ಯಾಕ್ಸ್ ಹಾಕಿ. ಈ ರೀತಿ ಅಶ್ಲೀಲ ಚಿತ್ರ ಪ್ರದರ್ಶನ ಮಾಡುವವರಿಗೆ, ನಾಟಕದಲ್ಲಿ ಉಪಯೋಗಿಸುವವರಿಗೆ ಎಂಟರ್‌ಟೇನ್‌ಮೆಂಟ್ ಟ್ಯಾಕ್ಸ್ ಹಾಕಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ನಾಟಕದವರು ಸಿನೇಮಾ ಫೋಟೋಗ್ರಾಫಿ ತಂತ್ರಜ್ಞಾನವನ್ನು ನಾಟಕದ ಮಧ್ಯೆ ಉಪಯೋಗಿಸಿದರೆ ಆಗ ಈ ಆಕ್ಟ್ ಅಪ್ಲೈ ಆಗುತ್ತದೆಂದು ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ, ಮತ್ತು ಅದನ್ನು ಮಾಡಬೇಕೆಂದು ಸಲಹೆ ಕೊಡುತ್ತಿದ್ದೇನೆ. ಇದು ಹಣಕಾಸಿನ ಮಂತ್ರಿಗಳಿಗೆ ಬಿಟ್ಟದ್ದು. ಈ ವಿಷಯವನ್ನು ತಾವು ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ.

+ಶ್ರೀ ಜಿ.ಬಿ. ಶಿವಕುಮಾರ್ (ಕುರುಗೋಡು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ನಾಣಯ್ಯನವರು ಏನು ಒಂದು ಶಾಸನವನ್ನು ತಂದಿದ್ದಾರೆ ಅದನ್ನು ಬಹುತೇಕ ಸ್ವಾಗತಿಸುತ್ತಾ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ನಾನು ನೇರವಾಗಿ ಕೆಲವನ್ನು ಇಲ್ಲಿ ಪ್ರಶ್ನೆ ಮೂಲಕ ವಿಚಾರಿಸತಕ್ಕದ್ದು ಇಷ್ಟೆ. ತಾವು ಸಿನೆಮಾ ನೋಡುತ್ತಿದ್ದ ಕಾಲದಲ್ಲಿ ದಿನಕ್ಕೆ ಎಷ್ಟು ಪ್ರದರ್ಶನ ಇತ್ತು? ಆ ದಿನದ ಸಿನೆಮಾ

ಮಂದಿರದ ಸ್ವಚ್ಛತೆ ಎಷ್ಟರಮಟ್ಟಿಗೆ ಇತ್ತು ಎಂಬುದನ್ನು ಹೇಳತಕ್ಕ ರೂಪದಲ್ಲಿ ನನ್ನ ಮಾತನ್ನು ಪ್ರಾರಂಭಿಸುತ್ತೇನೆ. ನಾನು ವಿದ್ಯಾರ್ಥಿಯಾಗಿದ್ದಾಗ ಶನಿವಾರ ಮತ್ತು ಭಾನುವಾರ ಎರಡು ದಿವಸ ಮಾತ್ರ ಮ್ಯಾಟ್ನಿ ಮತ್ತು ಮಾರ್ನಿಂಗ್ ಷೋ ಇದ್ದದ್ದು. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಆದಾಯದ ದೃಷ್ಟಿಯಿಂದ ಬೆಳಿಗ್ಗೆ 9ಕ್ಕೆ ಸಿನೆಮಾ ಶುರು ಮಾಡಿ ರಾತ್ರಿ 12ರವರೆಗೆ ನಡೆಸುತ್ತಾರೆ. ನಾವು ವಿದ್ಯಾರ್ಥಿಗಳಿಗೆ ಸೌಲಭ್ಯವಾಗಲಿ ಎಂದು ಗ್ರಾಮೀಣ ಪ್ರದೇಶಗಳಿಂದ ಬಸ್ ಹಾಕಿಸಿದ್ದು. ಆದರಲ್ಲಿ ಈಗ ಏನಾಗಿದೆ ಎಂದರೆ, 80 ಭಾಗ ಜನ ಬೆಳಿಗ್ಗೆ ಕಂಕುಳಲ್ಲಿ ಮಕ್ಕಳನ್ನು ಎತ್ತಿಕೊಂಡು ಸಿನೆಮಾಕ್ಕೆ ಬರುವುದಕ್ಕೆ ಶುರು ಮಾಡಿದ್ದಾರೆ. ನೀವು ಎಷ್ಟು ಬಸ್ಸುಗಳನ್ನು ಕೊಟ್ಟರೂ ಕೂಡ ನಿಮ್ಮ ಸೌಲಭ್ಯ ಸಾಲದು. ಅದಕ್ಕೂ ಇದಕ್ಕೂ ಸಂಬಂಧ ಇಲ್ಲದೆ ಹೋದರೂ ನಾನು ಈ ಮೂಲಕ ಸರ್ಕಾರವನ್ನು ಪ್ರಾರ್ಥಿಸಿಕೊಳ್ಳುವುದು ಇಷ್ಟೆ. ಈ ಸಂಖ್ಯೆ ಏನಿದೆ, ಬೆಳಗಿನಿಂದ ರಾತ್ರಿಯವರೆಗೆ 4-5 ಪ್ರದರ್ಶನ, ಇದರಿಂದ ಷ್ಯೂಮಿಕೇಷನ್ ಎಫೆಕ್ಟ್ ಉಂಟಾಗುತ್ತದೆ. ಮೊದಲು ಒಂದು ಪ್ರದರ್ಶನಕ್ಕೂ, ಇನ್ನೊಂದು ಪ್ರದರ್ಶನಕ್ಕೂ ಅರ್ಧಗಂಟೆ ಗ್ಯಾಪ್ ಇರುತ್ತಿತ್ತು. ಏತಕ್ಕೆಂದರೆ ಒಳಗೆ ಇರತಕ್ಕ ಗಾಳಿ ಹೊರಗೆ ಹೋಗಲಿ ಎಂದು. ಎಕ್ಸಾಸ್ಟ್ ಫ್ಯಾನ್ ಕೆಲಸ ಮಾಡುವುದಿಲ್ಲ. ಕಂಜೆಷನ್, ಸ್ಕಿನ್ ಡಿಸೀಸ್ ಬರುತ್ತದೆ. ಭಾತ್ ರೂಮಿಗೆ ಹೋದವರಿಗೆ ಸ್ಕಿನ್ ಡಿಸೀಸ್ ಬಂದು ವೆನೀರಿಯಲ್ ಅಟ್ಯಾಕ್ ಆಗಿರತಕ್ಕ ನಿದರ್ಶನ ಕೂಡ ಉಂಟು. ಇದು ಉತ್ಪ್ರೇಕ್ಷೆ ಅಲ್ಲ. ಅಲ್ಲಿ ಕುಡಿಯವ ನೀರಿನ ಸೌಲಭ್ಯ ಚೆನ್ನಾಗಿಲ್ಲ. ಈ ದೃಷ್ಟಿಯಿಂದ ನೀವು ಕಟ್ಟುನಿಟ್ಟಾದ ನೀತಿಯನ್ನು ಜಿಲ್ಲಾ ಆಡಳಿತದಲ್ಲಿ ತಂದು, ಯಾರು ಅದರ ಹತೋಟಿ ಇಟ್ಟುಕೊಂಡಿದ್ದಾರೆ ಅವರು ಮಾಡತಕ್ಕದ್ದು ಬಹಳ ಅಗತ್ಯವೆಂಬುದು ನನ್ನ ಸ್ಪಷ್ಟವಾದ ಅಭಿಪ್ರಾಯ. ಇವತ್ತಿನ ದಿವಸ ಯುವಜನರಿಗೆ ಆದರ್ಶವಾದ ಎಷು ಸಿನೆಮಾಗಳು ಬರುತ್ತಿವೆ? ಯಾವುದಾದರೂ ಒಂದು ಪ್ರದರ್ಶನ ಬಂದರೆ ಮರುದಿವಸ ಪತ್ರಿಕೆಯಲ್ಲಿ ಸಿನೆಮಾದಿಂದ ಪ್ರಭಾವಿತನಾಗಿ ಕೊಲೆ ಮಾಡಿದ ಎಂದು ಹೇಳತಕ್ಕ ನಿದರ್ಶನಗಳೂ ಕೂಡ ಉಂಟು. ಸಿನೆಮಾ ಪ್ರಭಾವದಿಂದ ಅನೇಕ ಪ್ರೇಮ ಪ್ರಕರಣಗಳು ನಡೆದಿರತಕ್ಕದ್ದು ಉಂಟು. ಇವತ್ತು ಪ್ರಮೀಳಾ ನೇಸರ್ಗಿಯವರು ಏನು ಹೇಳುತ್ತಿದ್ದರು ಆ ರೀತಿ ಆ ಮಟ್ಟಕ್ಕೆ ನಮ್ಮ ಸಿನೆಮಾ ಗುಣಮಟ್ಟ ಆಗಿರುವುದರಿಂದ certainly younger people influenced by that. ಆದುದರಿಂದ ನೀವು ಸಬ್ಸಿಡಿ ಕೊಡತಕ್ಕದ್ದು ಮಾರ್ಗದರ್ಶನ ಮಾಡತಕ್ಕದ್ದರಲ್ಲಿ ತಾವು ಕಠಿಣವಾಗಿ ನಿರ್ದಾಕ್ಷಿಣ್ಯರಾಗಿ ಹೇಳಿದ್ದೀರಿ. ಕೆಲವು ಕಾಮೆಂಟ್ಸ್‌ಗೆ ಗುರಿಯಾಗಿದ್ದೀರಿ. ಆದರೂ ಪರವಾಗಿಲ್ಲ. ಆದರೂ ಪರವಾಗಿಲ್ಲ. ಈ ಪ್ರಭಾವ ಮುಂದಿನ ಜನರೇಷನ್‌ಗೆ ಸದ್ಭಾವನೆ ಬೆಳೆಸಿಕೊಳ್ಳತಕ್ಕದ್ದು ಆಗಬೇಕು. ಬಹಳ ಕಡಿಮೆ ಹಣದಲ್ಲಿ 3 ಗಂಟೆಗಳ ಕಾಲ ಕಳೆಯುವುದು ಎಂದರೆ ಈ ಸಿನೆಮಾ ಎಂಬುದನ್ನು ಒಪ್ಪಿಕೊಳ್ಳೋಣ. ಆದರೆ ನೀವು ಸ್ವಲ್ಪ ನೆನಸಿಕೊಳ್ಳಿ. ಆ ಮಟ್ಟಕ್ಕೆ ಈ ಮಟ್ಟಕ್ಕೆ ಅದರ ಅಡ್ವರ್ಸ್ ಅಫೆಕ್ಟ್ ಏನಾಗುತ್ತಿದೆ ಸಮಾಜದ ಮೇಲೆ ಎಂಬುದನ್ನು ದಯಮಾಡಿ ನೋಡಬೇಕೆಂದು ಹೇಳುತ್ತೇನೆ. ಮತ್ತೊಂದು ಏನೆಂದರೆ, ಮೊದಲು ನಿನೆಮಾಕ್ಕೆ ಹೋದತಕ್ಷಣ ರಾಷ್ಟ್ರೀಯ ವಾರ್ತೆ ಬರುತ್ತಿತ್ತು. ಸುಮಾರು 10-15 ನಿಮಿಷ, ಸಮಾಜದ ಬಗ್ಗೆ, ರಾಷ್ಟ್ರದ ಬಗ್ಗೆ ಎಂದು ವಾರ್ತೆ ಬಂದು ಏನಾಗುತ್ತದೆಂದು ತೋರಿಸಿದ ನಂತರ ಕೊನೆಗೆ ಹೋಗುವಾಗ ರಾಷ್ಟ್ರಗೀತೆ ಇತ್ತು. ಬಹುಶಃ ಈಗ ಯಾರೂ ಅದಕ್ಕೆ ಧ್ವನಿಗೂಡಿಸುತ್ತಿಲ್ಲ. ಇವತ್ತು ಸಿನೆಮಾ ಬಿಟ್ಟು ಹೊರಗೆ ಬರುವುದರೊಳಗೆ ಕರ್ಫೀಫ್

ಎಸೆದು ಸೀಟು ಹಿಡಿದುಕೊಳ್ಳುವುದಕ್ಕೆ ನುಗ್ಗತಕ್ಕ ದೃಶ್ಯ ನೋಡುತ್ತಿದ್ದೇವೆ. ಕನಿಷ್ಠ ಶಿಸ್ತು, ಕನಿಷ್ಠ ರೀತಿ ನೀತಿ ಇಟ್ಟುಕೊಳ್ಳತಕ್ಕದ್ದು ಮಾಡಬೇಕು. ಅದನ್ನು ಹತೋಟಿಗೆ ತರಲು ಒಂದು ಕಾವಲು ಸಮಿತಿ ಮಾಡಿ ಎಂದು ಹೇಳಿದರು. ಆ ಕಾವಲು ಸಮಿತಿ ಮಾಡಿದರೆ ಕುರಿ ಕಾಯುವ ತೋಳದಂತಾಗುತ್ತದೆ. ಅವನು ಮನೆಯವರನ್ನೆಲ್ಲಾ ಕೂರಿಸಿಕೊಂಡು ಏನೆಲ್ಲಾ ಮಾಡುವುದಕ್ಕೆ ಅನುಮತಿ ಕೊಡತಕ್ಕದ್ದು ಉಂಟು. ಆದ್ದರಿಂದ ನೀವು ಇದರಲ್ಲಿ ಒಂದು ಶಾಸನ ತಂದು ಒಂದು ಕಡೆ ಆದಾಯ ಬರುವಂತೆ ಮತ್ತೊಂದು ಕಡೆ ರೀತಿ ನೀತಿ ಇಟ್ಟುಕೊಳ್ಳುವಂತೆ ಮಾಡಬೇಕೆಂದು ಈ ಮೂಲಕ ಸಲಹೆ ಕೊಟ್ಟು ತಾವು ತಂದಿರತಕ್ಕ ಶಾಸನವನ್ನು ಸ್ವಾಗತಿಸುತ್ತೇನೆ.

+ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕಾನೂನು ಸಚಿವರು ಮಂಡಿಸಿರತಕ್ಕ ಈ ತಿದ್ದುಪಡಿ ಮಸೂದೆ ಸಾಮಾಜಿಕ ನ್ಯಾಯಕ್ಕೆ ಪೂರ್ಣವಾಗಿ ವಿರುದ್ಧವಾಗಿದೆ. ಕಾರಣ ಏನೆಂದರೆ ನಮ್ಮ ಕಾನೂನಿನಲ್ಲಿ ಎರಡು ಭಾಗಗಳು ಇವೆ. ಲೈಸೆನ್ಸ್ ನೀಡುವಾಗ ಅವನು ಯಾವ ರೀತಿ ಥಿಯೇಟರ್‌ಗಳಲ್ಲಿ ಸಾರ್ವಜನಿಕ ಸೌಕರ್ಯಗಳನ್ನು ಇಡಬೇಕೆಂಬುದು ಅದರಲ್ಲಿರತಕ್ಕ ನಿಯಮಾವಳಿ. ಲೈಸೆನ್ಸ್ ರದ್ದು ಮಾಡಬೇಕಾದರೆ ಯಾವ ಯಾವ ಷರತ್ತುಗಳು ಉಲ್ಲಂಘನೆಯಾಗಿರುತ್ತವೆ ಆ ಷರತ್ತುಗಳ ಪ್ರಕಾರ ಉಲ್ಲಂಘನೆಯಾಗಿದ್ದರೆ ರದ್ದುಪಡಿಸಬಹುದು. ಲೈಸೆನ್ಸ್ ಪಡೆದ ಮನುಷ್ಯ ತಾನು ಕೊಡಬೇಕಾದ ಬಾಕಿ ಕೊಡದಿದ್ದರೆ ಅದನ್ನು ವಸೂಲ್ಮಾಡುವುದಕ್ಕೆ ಕಂದಾಯ ಕಾನೂನು ಪ್ರಕಾರ ಇವರಿಗೆ ಸಂಪೂರ್ಣ ಅಧಿಕಾರ ಇದೆ. ಆ ಅಧಿಕಾರ ಇಟ್ಟುಕೊಂಡು ಈಗ ಮತ್ತೊಂದು ತಿದ್ದುಪಡಿ ತಂದು ಯಾವ ಲೈಸೆನ್ಸಿಗೆ, ಷರತ್ತಿಗೆ ಹೊರತಾಗಿರತಕ್ಕ ಷರತ್ತುಗಳನ್ನು ಸೇರಿಸತಕ್ಕದ್ದು ಸಾಮಾಜಿಕ ನ್ಯಾಯ ದೃಷ್ಟಿಯಿಂದ ಒಳ್ಳೆಯದಲ್ಲ. ಇವರಿಗೆ ಅವನು ಕೊಡಬೇಕಾದ ಬಾಕಿ ಮನರಂಜನಾ ತೆರಿಗೆಯನ್ನು ಕಂದಾಯ ರೂಪದಲ್ಲಿ ವಸೂಲ್ಮಾಡುವುದಕ್ಕೆ ಅಧಿಕಾರ ಇರುವಾಗ ಆ ಅಧಿಕಾರವನ್ನು ಬಳಸಿಕೊಳ್ಳತಕ್ಕ ಶಕ್ತಿ ಸರ್ಕಾರಕ್ಕೆ ಇದ್ದರೆ ಅನಾವಶ್ಯಕವಾಗಿ ಮತ್ತೊಂದು ತಿದ್ದುಪಡಿ ಮಸೂದೆಯನ್ನು ಈ ಶಾಸನ ಸಭೆಯಲ್ಲಿ ತರತಕ್ಕದ್ದು ನ್ಯಾಯವಲ್ಲ. ಇವತ್ತು ಎಲ್ಲಾ ಕಾನೂನಿನಲ್ಲಿ ಸರ್ಕಾರಕ್ಕೆ ಸರ್ವವಿಧಿತವಾದ ಅಧಿಕಾರ ಇದೆ. ಸರ್ಕಾರಕ್ಕೆ ಕೊಡಬೇಕಾದ ಬಾಕಿ ವಸೂಲ್ಮಾಡುವುದಕ್ಕೆ ಕಂದಾಯ ಅಧಿನಿಯಮದ ಪ್ರಕಾರ ವಸೂಲ್ಮಾಡುವುದಕ್ಕೆ ಅಧಿಕಾರ ಇರುವಾಗ ಅದು ನಾಗರೀಕ ಹಕ್ಕು. ಯಾವ ಯಾವ ಕಾರಣಕ್ಕೆ ಲೈಸೆನ್ಸ್ ರದ್ದು ಮಾಡಬಹುದು ಆ ಕಾರಣಕ್ಕೆ ಮಾಡಿದರೆ ನಮ್ಮದು ವಿರೋಧ ಇಲ್ಲ. ಯಾವುದೋ ಕಾರಣಕ್ಕೆ ಲೈಸೆನ್ಸ್ ರದ್ದುಪಡಿಸುವುದಕ್ಕೆ ಅವಕಾಶ ಇಲ್ಲ. ಒಬ್ಬ ನಾಗರೀಕ ಕೊಡಬೇಕಾದ ಬಾಕಿ ಕೊಡದಿದ್ದರೆ ಅವನಿಂದ ವಸೂಲ್ಮಾಡುವುದಕ್ಕೆ, ಬೇರೆ ವಿಧವಾದ ಕಾನೂನು ಪ್ರಯೋಗ ಮಾಡುವುದಕ್ಕೆ ಅವಕಾಶ ಇದೆ. ಅದನ್ನು ಬಳಸಿಕೊಳ್ಳುವುದು ಬಿಟ್ಟು ಒಬ್ಬ ನಾಗರೀಕನನ್ನು ತುಳಿಯತಕ್ಕ ಪ್ರಯತ್ನ ಇದರಿಂದಾಗುತ್ತದೆ. ಆದ್ದರಿಂದ ನಾನು ಹೇಳುವುದು ನಾಗರೀಕನಿಗೆ ಇದ್ದಂಥ ಮೂಲಭೂತ ಹಕ್ಕನ್ನು ಇದರಿಂದ ರಕ್ಷಿಸಿದಂತೆ ಆಗುವುದಿಲ್ಲ. ಜೊತೆಗೆ ಅವನಿಗೆ ಸಿಕ್ಕಿದಂಥ ಮೂಲಭೂತ ಹಕ್ಕನ್ನು ನೀವು ದೋಚಿಕೊಂಡಂತೆ ಆಗುತ್ತದೆ. ಆ ದೃಷ್ಟಿಯಿಂದ ಮಾನ್ಯ ಕಾನೂನು ಸಚಿವರು ಈ ದಿಸೆಯಲ್ಲಿ ಏಕೆ ಆಲೋಚನೆ ಮಾಡಿಲ್ಲ? ಆಲೋಚನೆ ಮಾಡಿದ್ದರೆ ಹೈಕೋರ್ಟ್‌ನವರು ಹೇಳಿದ್ದಕ್ಕಿಂತ ಸಹಜವಾಗಿದೆ. ಅವರು ಏನು ನೀವು ಯಾವ ಕಾರಣದಿಂದ ಲೈಸೆನ್ಸ್ ರದ್ದುಪಡಿಸುವುದಕ್ಕೆ ನೋಟೀಸ್ ಕೊಟ್ಟಿದ್ದಾರೆ,

ಅದಕ್ಕೆ ಕಾರಣವೇ ಇದು ಕಾನೂನಿನಲ್ಲಿ ಇಲ್ಲದೇ ಇರುವುದಕ್ಕಾಗಿ. ಕಾನೂನು ಪ್ರಕಾರ ಬೇರೆ ವಿಧದಿಂದ ವಸೂಲು ಮಾಡುವುದಕ್ಕೆ ಅವಕಾಶ ಇದೆ. ಮತ್ತೆ ಇನ್ನೊಂದಿದೆ. ತಾವೇನೋ ಹೇಳಿಬಿಟ್ಟಿರಿ ಏರ್‌ಕಂಡೀಷನ್ ವಗೈರೆ ಎಂದು . ನಮ್ಮಲ್ಲಿ ಟೂರಿಂಗ್ ಟಾಕೀಸ್‌ನಿಂದ ಹಿಡಿದು ಬೆಂಗಳೂರಿನಲ್ಲಿರತಕ್ಕಂಥ ಏರ್‌ಕಂಡೀಷನ್ಡ್ ಟಾಕೀಸ್‌ವರೆಗೆ ಇದ್ದಾವೆ. ಆದರೆ ನಿಮ್ಮ ಷರತ್ತುಗಳನ್ನು ಹೇಳಿ ಟೂರಿಂಗ್ ಟಾಕೀಸ್‌ಗೆ ಏನು ಸವಲತ್ತುಗಳು ಇರಬೇಕು, ತಾಲ್ಲೂಕು ಮಟ್ಟದ ಟಾಕೀಸ್‌ಗಳಿಗೆ ಏನು ಇರಬೇಕು, ಜಿಲ್ಲಾಮಟ್ಟದಲ್ಲಿ ಇರತಕ್ಕಂಥವುಗಳಿಗೆ ಏನು ಇರಬೇಕು, ಸಿಟಿಗಳಲ್ಲಿ ಏನಿರಬೇಕು, ಗ್ರೂಪ್ 'ಏ' ಸಿಟಿಗಳಲ್ಲಿ ಏನಿರಬೇಕು, ಮುನಿಸಿಪಾಲಿಟಿಗಳಲ್ಲಿ ಏನಿರಬೇಕು ಎಂದು ಇಂಥಾದ್ದೆಲ್ಲಾ ಇವೆ. ಇದನ್ನು ಸ್ವಲ್ಪ ವರ್ಗೀಕರಣ ಮಾಡುವ ವಿಚಾರದಲ್ಲಿ ಒಂದೇ ತರಹ ಇಲ್ಲ. ಹೀಗೆ ಆಗಿರುವುದರಿಂದ ಸ್ವಲ್ಪ ವೈಜ್ಞಾನಿಕವಾಗಿ ಇವುಗಳನ್ನು ವಿಶ್ಲೇಷಣೆ ಮಾಡಿ ವರ್ಗೀಕರಣ ಮಾಡಿ ಯಾವ್ಯಾವ ಹಂತದಲ್ಲಿ ಏನೇನು ನಾಗರೀಕ ಸೌಲಭ್ಯಗಳು ಇರಬೇಕು ಎಂದು ಅಂಥಾದ್ದು ಒದಗಿಸುವುದಕ್ಕೆ ಮೂಲಭೂತ ಆಲೋಚನೆ ಮಾಡತಕ್ಕಂಥ ವಿಚಾರವನ್ನೇ ಕಾನೂನು ಸಚಿವರು ಮಾಡದೆ ಸುಮ್ಮನೆ ಕುಳಿತಿದ್ದಾರೆ. ಆದ್ದರಿಂದ ಇದನ್ನು ಏಕೆ ಆಲೋಚನೆ ಮಾಡಬಾರದು ? ಇಂತಹ ಒಂದು ಸನ್ನಿವೇಶದಲ್ಲಿ, ಒಂದು ಕಾನೂನಿಗೆ ತಿದ್ದುಪಡಿಯನ್ನು ತರತಕ್ಕಂಥ ಸನ್ನಿವೇಶದಲ್ಲಿ ಇದು 25-30 ವರ್ಷಗಳ ಹಿಂದೆ ತಂದಂಥ ಕಾನೂನು. ಇತ್ತೀಚೆಗೆ ಅನೇಕ ಬದಲಾವಣೆಗಳು ಆಗಿವೆ. ಇವತ್ತು ಜನರಲ್ಲಿ ಬಹಳಷ್ಟು ಬದಲಾವಣೆಗಳು ಆಗಿವೆ. ಜನರ ದೃಷ್ಟಿಕೋನದಲ್ಲಿ ಬದಲಾವಣೆಗಳು ಆಗಿವೆ. ಜನರ ರುಚಿ ಬದಲಾವಣೆಯಾಗಿದೆ, ಅವರ ಆಲೋಚನೆ, ವಿಚಾರಗಳು ಬದಲಾವಣೆಯಾಗಿವೆ. ಇದೆಲ್ಲ ಬದಲಾವಣೆಯಾಗಿರುವ ಸಂದರ್ಭದಲ್ಲಿ ನೀವು ಕೊಡುವಂಥ ಲೈಸೆನ್ಸಿನ ಷರತ್ತುಗಳಿಗೆ ಸೂಕ್ತ ಬದಲಾವಣೆ ತರತಕ್ಕಂಥ ಕೆಲಸವನ್ನು ಮಾನ್ಯ ಸಚಿವರು ಮಾಡದೇ ಹೋದರೆ ತಾವು ಇಲಾಖೆಯನ್ನು ಯಾವರೀತಿ ನಿರ್ವಹಿಸುತ್ತೀರಿ ಎನ್ನತಕ್ಕಂಥ ಪ್ರಶ್ನೆಯನ್ನು ಮಾಡಬೇಕಾಗುತ್ತದೆ.

+ ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಇದು ಸರಳವಾಗಿರತಕ್ಕಂಥ ತಿದ್ದುಪಡಿ. ಬೇರೆ ಬೇರೆ ವಿಚಾರಗಳ ಬಗ್ಗೆ ಅವರು ಮಾತನಾಡಿಬಿಟ್ಟಿದ್ದಾರೆ. ಸಬ್ಸಿಡಿ ವಿಚಾರ ಬಂದಿದೆ. ಕನ್ನಡ ಚಲನಚಿತ್ರದ ಬಗ್ಗೆ ವಾಟಾಳ್ ನಾಗರಾಜ್ ಅವರು ಮಾತನಾಡಿಬಿಟ್ಟರು. ಬಹುಶಃ ಇದಕ್ಕೆಲ್ಲಾ ಈ ಸಂದರ್ಭದಲ್ಲಿ ಉತ್ತರ ಹೇಳಬೇಕು ಎಂದರೆ ಅದು ಸರಿಯಾದ ಕ್ರಮ ಆಗುವುದಿಲ್ಲ. ಆದರೆ ತಿದ್ದುಪಡಿಗೆ ಸಂಬಂಧಪಟ್ಟಹಾಗೆ ಈ ತಿದ್ದುಪಡಿಯನ್ನು ನಾವು ತರಲೇ ಬೇಕಾಗುತ್ತದೆ. ಎಂಟರ್ಟೈನ್‌ಮೆಂಟ್ ಟ್ಯಾಕ್ಸನ್ನು ಯಾರು ಸಿನೇಮಾ ನೋಡುವುದಕ್ಕೆ ಹೋಗುತ್ತಾರೆ ಅವರ ಕಡೆಯಿಂದ ಟಿಕೇಟ್ ಮುಖಾಂತರ ಸಂಗ್ರಹ ಮಾಡಿಕೊಂಡು ಆ ಹಣವನ್ನು ಸರ್ಕಾರಕ್ಕೆ ಕೊಡದೇನೇ ಅವನ ಹಿಂದೆ ನೀನು ಅವನ ಜಮೀನನ್ನು ಎಲ್ಲಿಯಾದರೂ ಹರಾಜು ಮಾಡಿ ವಸೂಲಾತಿ ಮಾಡಿಕೊಳ್ಳಪ್ಪ, ನಿನ್ನ ಲೈಸೆನ್ಸನ್ನು ರದ್ದು ಮಾಡುವುದಕ್ಕೆ ಇರತಕ್ಕಂಥ ಕ್ರಮವನ್ನು ಏಕೆ ತೆಗೆದುಕೊಳ್ಳುತ್ತೀಯಾ. ಇದು ಸಾಮಾಜಿಕ ನ್ಯಾಯದ ಪರ ಎಂದು ಹೇಳಿದರೆ ಇದು ಯಾವ ಸಾಮಾಜಿಕ ನ್ಯಾಯ...

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ....

ಶ್ರೀ ಎಂ.ಸಿ. ನಾಣಯ್ಯ : ಸ್ವಲ್ಪ ಕೇಳಿ. ನಿಮ್ಮ ಸಾಮಾಜಿಕ ನ್ಯಾಯ ಬಗ್ಗೆಯೇ ನಾನು ಮಾತನಾಡುತ್ತಿದ್ದೇನೆ. ಏಕೆಂದರೆ ನೀವು ಸಮಾಜವಾದಿಗಳು ಅಲ್ವಾ? ನಿಮ್ಮ ಸಮಾಜವಾದದೊಳಗೆ ಈಗ ಬಹಳ ಬದಲಾವಣೆಗಳು ಆಗಿಬಿಟ್ಟಿವೆ...

ಶ್ರೀ ಕಾಗೋಡು ತಿಮ್ಮಪ್ಪ : ನೀವು ಕೇಳುವುದಕ್ಕೇ ತಯಾರಿಲ್ಲ.

ಶ್ರೀ ಎಂ.ಸಿ. ನಾಣಯ್ಯ : ಸ್ವಲ್ಪ ನಿಲ್ಲಿ. ನಾನು ಹೇಳುವುದನ್ನು ಕೇಳಿ. ಜನರ ಕೈಯಿಂದ ಹಣ ತೆಗೆದುಕೊಳ್ಳುತ್ತಾರೆ, ಟಿಕೇಟ್ ಮಾರಾಟ ಮಾಡುತ್ತಾರೆ. ಹಣ ಸಂಗ್ರಹ ಮಾಡಿಕೊಂಡು ಅದನ್ನು ಪೆಟ್ಟಿಗೆಯಲ್ಲಿ ಇಟ್ಟುಕೊಳ್ಳುತ್ತಾರೆ. ಅದನ್ನು ಸರ್ಕಾರಕ್ಕೆ ಮಾರನೇದಿವಸ ಜಮಾ ಮಾಡಬೇಕು. ಅದು ಅವನ ಹಣ ಅಲ್ಲ. ಯಾರು ಸಿನೆಮಾ ನೋಡುವುದಕ್ಕೆ ಹೋಗುತ್ತಾರೆ, ಅವರು ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಕೊಡುತ್ತಾರೆ. ಹಾಗೆ ಕೊಟ್ಟಿರತಕ್ಕಂಥ ಹಣವನ್ನು ಮಾರನೇ ದಿವಸ ಸರ್ಕಾರಕ್ಕೆ ಪಾವತಿ ಮಾಡುವುದಕ್ಕೆ ತಯಾರಿಲ್ಲ. ಇಂತಹವರ ಬಗ್ಗೆ ನಾವು ತೆಗೆದುಕೊಳ್ಳಬೇಕಾದ ಕ್ರಮ ಯಾವುದಿದೆ, ಲೈಸೆನ್ಸ್ ಕೊಡುವವರು ನಾವು. ಜನರ ಕೈಯಿಂದ ತೆಗೆದುಕೊಂಡಿರತಕ್ಕಂಥ ಹಣವನ್ನು ಸರ್ಕಾರಕ್ಕೆ ಕೊಡಬೇಕಾದ ತೆರಿಗೆಯನ್ನು ಕೊಡುವುದಿಲ್ಲ. ಆದ್ದರಿಂದ ಅದನ್ನು ಕೊಡುವವರೆಗೆ ನಿನ್ನ ಲೈಸೆನ್ಸನ್ನು ಅಮಾನತ್ತು ಮಾಡುತ್ತೇವೆ ಎಂದು ಹೇಳಿದರೆ ಅದು ಸಾಮಾಜಿಕ ನ್ಯಾಯದ ವಿರುದ್ಧವಾಗುತ್ತದಾ? ಅದರಲ್ಲೂ ಅತ್ಯಂತ ಹಿರಿಯ ಸಮಾಜವಾದಿಗಳಾಗಿರತಕ್ಕಂಥ ಕಾಗೋಡು ತಿಮ್ಮಪ್ಪನವರ ಚಿಂತನೆ ಹೋಗಿ ಹೋಗಿ ಎಲ್ಲಿಗೆ ಮುಟ್ಟಿದೆ? ಜನರ ಕೈಯಿಂದ ಹಣವನ್ನು ವಸೂಲಾತಿ ಮಾಡಿಕೊಂಡು, ಅದನ್ನು ತಮ್ಮಲ್ಲೇ ಇಟ್ಟುಕೊಂಡು, ಸರ್ಕಾರಕ್ಕೆ ಕೊಡಬೇಕಾದುದನ್ನು ಕೊಡಬೇಡಪ್ಪ ಎಂದು ಹೇಳಿದರೆ, ಹಾಗೆ ವಾದ ಮಾಡುವುದಾದರೆ ಇದು ಏನು ಸಾಮಾಜಿಕ ನ್ಯಾಯ? ಆದ್ದರಿಂದ ನೀವು ಹೇಳಿರತಕ್ಕಂಥ ಇತರ ವಿಚಾರಗಳು ನಿಜ. ಈ ಸಿನೆಮಾಟೋಗ್ರಾಫಿ ರೂಲ್ಸ್ ಯಾವುದು ಉಂಟು ಅದು ಹಳೆಯ ಕಾಲದ್ದು. ಅದಕ್ಕೆ ಸಮಗ್ರವಾದ ತಿದ್ದುಪಡಿಯನ್ನು ತರಬೇಕು. ಆದರೆ ಇದು ನೇರವಾಗಿ ನನ್ನ ಇಲಾಖೆಗೆ ಬರುವುದಿಲ್ಲ. ಅದು ಮುಖ್ಯಮಂತ್ರಿಗಳಿಗೆ ಬರತಕ್ಕಂಥಾದ್ದು, ಹೋಮ್ ಡಿಪಾರ್ಟ್‌ಮೆಂಟ್‌ಗೆ ಬರುತ್ತದೆ. ಆದರೂ ಕೂಡ ನೀವು ಎತ್ತಿರತಕ್ಕಂಥ ವಿಚಾರಗಳನ್ನು ನಾನೇ ಎರಡು-ಮೂರು ಸಲ ಚರ್ಚೆ ಮಾಡಿದ್ದೇನೆ. ಇದು ಸಮಗ್ರವಾದ ತಿದ್ದುಪಡಿಯನ್ನು ತರಬೇಕು. ಸಿನೆಮಾ ಮಂದಿರಗಳು ನಡೆಯುತ್ತಿರತಕ್ಕಂಥ ರೀತಿನೀತಿಗಳನ್ನು ನೋಡಿದಾಗ, ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಇರುವ ಟೂರಿಂಗ್ ಟಾಕೀಸ್‌ಗಳನ್ನು ಇವತ್ತಿನ ಕಾನೂನಿನ ಅಡಿಯಲ್ಲಿ ಅವುಗಳನ್ನು ಮುಂದುವರೆಸಿಕೊಂಡು ಹೋಗುವುದಕ್ಕೆ ಅವಕಾಶ ಇಲ್ಲ. ಆದರೆ ಟೂರಿಂಗ್ ಟಾಕೀಸ್‌ಗಳು ಬೇಕಾದಷ್ಟು ಇವೆ. ಸುಮಾರು 300 ಟೂರಿಂಗ್ ಟಾಕೀಸ್‌ಗಳು ಕರ್ನಾಟಕ ರಾಜ್ಯದಲ್ಲಿವೆ. ಪ್ರತಿವರ್ಷ ಅವರು ಬಂದು ಒಂದು ರೆಪ್ರಸೆಂಟೇಷನ್ ಕೊಡುವುದು ಮಾಡುತ್ತಾರೆ. ಈ ಟೂರಿಂಗ್ ಟಾಕೀಸ್‌ಗಳನ್ನು ಸೆಮಿ ಪರ್ಮನೆಂಟ್ ಥಿಯೇಟರ್ ಆಗಿ ಮಾಡಬೇಕು. ಅವರ ಲೈಸೆನ್ಸ್ ರಿನ್ಯೂ ಮಾಡುವುದಕ್ಕೆ ಅವಕಾಶ ಇಲ್ಲ. ಆದರೂ ಕೂಡ ಅವರು ರೆಪ್ರಸೆಂಟೇಷನ್ ಕೊಡುವುದು, ಒಂದು ವರ್ಷ ನಾವು ಅದನ್ನು ಮುಂದಕ್ಕೆ ಹಾಕುವುದು. ಪುನಃ ಒಂದು ರೂಲ್‌ಗೆ ಅಮೆಂಡ್‌ಮೆಂಟ್ ತರುವುದು, ಅದನ್ನು ಮುಂದಕ್ಕೆ ಹಾಕುವುದು. ಇದನ್ನು ನಾಲ್ಕೈದು ವರ್ಷಗಳಿಂದ

ಮಾಡಿಕೊಂಡು ಬಂದಿದ್ದೇವೆ. ಎಲ್ಲೋ ಒಂದು ಕಾಲದಲ್ಲಿ ಇದಕ್ಕೆ ತಡೆಯನ್ನು ಹಾಕಲೇಬೇಕು. ಟೂರಿಂಗ್ ಟಾಕೀಸ್‌ಗಳು ಹೇಗೆ ಇವೆಯೆಂದು ನೀವು ಹೇಳಿದ್ದೀರಿ. ಎಲ್ಲಿಯಾದರೂ ಶಾರ್ಟ್‌ಸರ್ಕ್ಯೂಟ್ ಆಗಿ ಬೆಂಕಿ ಬಿದ್ದುಬಿಟ್ಟರೆ - God forbid, let it not happen. ಬಹಳ ದೊಡ್ಡ ಅನಾಹುತ ಆಗಿರತಕ್ಕಂಥಾದ್ದನ್ನು ನಾವು ನೋಡಿದ್ದೇವೆ. ಡೆಲ್ಲಿಯಲ್ಲಿ ಏನಾಯಿತೆಂದು ನಾವು ನೋಡಿದ್ದೇವೆ. ಇಂತಹ ಪರಿಸ್ಥಿತಿ ನಿರ್ಮಾಣವಾಗದ ಹಾಗೆ ತಾವು ಹೇಳಿರತಕ್ಕಂಥ ಸಲಹೆ ಯಾವುದಿದೆ, ಅದನ್ನು ಜಾರಿಗೆ ತರಬೇಕು. ಇದಕ್ಕೆ ಸಮಗ್ರವಾದ ತಿದ್ದುಪಡಿಯನ್ನು ಕಾನೂನಿನಲ್ಲಿ, ನಿಯಮಾವಳಿಯಲ್ಲಿ ತರುವುದಕ್ಕೆ ನಾನೇ ಹೋಮ್ ಡಿಪಾರ್ಟ್‌ಮೆಂಟ್ ಜೊತೆ ಚರ್ಚೆ ಮಾಡಿ ಇದನ್ನು ತರುತ್ತೇನೆ. ಸನ್ಮಾನ್ಯ ಮೊಯಿಲಿಯವರೇ ತಾವು ಸಬ್ಸಿಡಿ ಬಗ್ಗೆ ಒಂದು ಮಾತನ್ನು ಆಡಿದ್ದೀರಿ. ಇದು ಈ ತಿದ್ದುಪಡಿಗೆ ನೇರವಾಗಿ ಸಂಬಂಧ ಇಲ್ಲದೇ ಇರುವಂಥಾದ್ದು. ಆದರೂ ದಯವಿಟ್ಟು ಒಂದನ್ನು ತಿಳಿದುಕೊಳ್ಳಿ. ಇಡೀ ರಾಷ್ಟ್ರದಲ್ಲಿ ಕರ್ನಾಟಕ ರಾಜ್ಯ ಒಂದೇ ಒಂದು ರಾಜ್ಯ ಕನ್ನಡ ಚಲನಚಿತ್ರಗಳಿಗೆ ಶೇಕಡಾ ನೂರರಷ್ಟು ಮನರಂಜನಾ ತೆರಿಗೆಯಿಂದ ವಿನಾಯ್ತಿ ಕೊಟ್ಟಿರುವಂಥಾದ್ದು. ಬೇರೆ ಯಾವುದೇ ರಾಜ್ಯದಲ್ಲಿ ಈ ಭಾಷಾ ಚಿತ್ರಗಳಿಗೆ ತೆರಿಗೆ ವಿನಾಯ್ತಿ ಇಲ್ಲ. ಇದು ಕರ್ನಾಟಕ ರಾಜ್ಯದಲ್ಲಿ ಮಾತ್ರ ಇದೆ. ಶೇಕಡಾ ನೂರರಷ್ಟು ತೆರಿಗೆ ವಿನಾಯ್ತಿ ಕೊಟ್ಟಿದ್ದರಿಂದ, ಇದರಿಂದ ಸರ್ಕಾರದ ಬೊಕ್ಕಸಕ್ಕೆ ಆಗತಕ್ಕಂಥ ನಷ್ಟ 35 ಕೋಟಿ ರೂಪಾಯಿಗಳು. ಮುಂಚೆ ಶೇಕಡಾ 50ರಷ್ಟು ಇತ್ತು. ಕಡೆಗೆ ನೂರರಷ್ಟು ಕೊಡಬೇಕಾದರೆ ಆ ಚಿತ್ರವನ್ನು ನೋಡಿ, ಆ ಚಿತ್ರದ ಗುಣಮಟ್ಟ ನೋಡಿ, ಸಮಾಜದ ಮೇಲೆ ಆಗತಕ್ಕಂಥ ಒಳ್ಳೆಯ ಪರಿಣಾಮವನ್ನು ನೋಡಿ ಒಂದು ವರ್ಷಕ್ಕೆ ಎರಡು ಅಥವಾ ಮೂರು ಚಿತ್ರಗಳಿಗೆ ಮಾತ್ರ ಶೇಕಡಾ ನೂರರಷ್ಟು ತೆರಿಗೆ ವಿನಾಯ್ತಿಯನ್ನು ಕೊಡುತ್ತಿದ್ದರು. ಆದರೆ ಈ ಕನ್ನಡ ಚಲನಚಿತ್ರಗಳನ್ನು ಬೆಳೆಸಬೇಕು, ನಿರ್ಮಾಪಕರು ಒಳ್ಳೊಳ್ಳೆ ಚಿತ್ರಗಳನ್ನು ನಿರ್ಮಾಣ ಮಾಡಲಿ ಎಂದು ದೃಷ್ಟಿಕೋನವನ್ನು ನಾವು ಇಟ್ಟುಕೊಂಡು ಶೇಕಡಾ100ರಷ್ಟು ವಿನಾಯ್ತಿ ಕೊಟ್ಟು17 ಕೋಟಿ ರೂಪಾಯಿಗಳನ್ನು ಕಳೆದುಕೊಂಡೆವು. ಈಗ ನಾವು ಸಬ್ಸಿಡಿ ಕೊಡುವುದು ಒಂದು ಚಿತ್ರಕ್ಕೆ ನಾಲ್ಕು ಲಕ್ಷ ರೂಪಾಯಿಗಳು. ವರ್ಷಕ್ಕೆ ನಿರ್ಮಾಣವಾಗುತ್ತಾ ಇರತಕ್ಕಂಥಾದ್ದು ಸುಮಾರು 80 ಚಲನಚಿತ್ರಗಳು. ನಾಲ್ಕು ಲಕ್ಷ ರೂಪಾಯಿ ಪ್ರಕಾರ ಮೂರು ಕೋಟಿ 20 ಲಕ್ಷ ನಾವು ಸಬ್ಸಿಡಿ ಕೊಟ್ಟಿದ್ದರೆ ಸಾಕಾಗುತ್ತಿತ್ತು. 17 ಕೋಟಿ ರೂಪಾಯಿ ವಸೂಲಿ ಮಾಡಿಕೊಂಡು ಮೂರೂವರೆ ಕೋಟಿ ಪ್ರತಿವರ್ಷ ಸಬ್ಸಿಡಿ ಕೊಟ್ಟಿದ್ದರೆ ಈ ಮಾತೇ ಬರುತ್ತಿರಲಿಲ್ಲ. ಆದರೆ ಅದರ ಬದಲು 17 ಕೋಟಿಯಷ್ಟು ವಿನಾಯ್ತಿ ಕೊಟ್ಟು ಪುನಃ ನಾವು ಎಲ್ಲಾ ಚಿತ್ರಗಳಿಗೆ ಸಬ್ಸಿಡಿ ಕೊಡಿ ಎಂದು ಕೇಳುತ್ತಾ ಇರತಕ್ಕಂಥ ವಾದ ಯಾವುದಿದೆ, ಮಾನ್ಯ ಉಪಾಧ್ಯಕ್ಷರೇ, ಬಹುಶಃ ಆ ಸಂದರ್ಭದಲ್ಲಿ ಇದರ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ) : ತಾವು ಸ್ವಲ್ಪ ಈಲ್ಡ್ ಆಗಬೇಕು. ಏಕೆ ಎಂದು ಹೇಳಿದರೆ ಒಂದು ವ್ಯತ್ಯಾಸ ಇದೆ. ಎಂಟರ್‌ಟೇನ್‌ಮೆಂಟ್ ಟ್ಯಾಕ್ಸ್‌ಗೂ ಸಬ್ಸಿಡಿಗೂ ವ್ಯತ್ಯಾಸ ಇದೆ. ತಮಗೆ ಗೊತ್ತಿದೆ ಎಷ್ಟು ದಿವಸ ಕನ್ನಡ ಚಿತ್ರಗಳು ನಡೆಯುತ್ತವೆ? ಅಲ್ಲಿ ನಡೆದರೆ ತಾನೇ ಎಂಟರ್‌ಟೇನ್‌ಮೆಂಟ್ ಟ್ಯಾಕ್ಸ್ ಕೊಡುವುದು? ಅಲ್ಲಿ ಚಿತ್ರಗಳು ನಡೆಯುವುದೇ ಇಲ್ಲ. ಒಳ್ಳೆಯ ಚಿತ್ರಗಳಿಗೆ ಸಬ್ಸಿಡಿ ಸಿಕ್ಕಿದರೆ ಸ್ವಲ್ಪ ಸುಧಾರಿಸಿಕೊಳ್ಳುತ್ತಾರೆ. ಇಲ್ಲದಿದ್ದರೆ ಥಿಯೇಟರ್ ಕೂಡ

ಸಿಗುವುದಿಲ್ಲ. ಕೆಲವು ಚಿತ್ರಗಳಿಗೆ ಕಡೆಯವರಿಗೂ ಥಿಯೇಟರ್ ಸಿಗುವುದಿಲ್ಲ. ಬಹಳ ಒಳ್ಳೆಯ ಚಿತ್ರಗಳನ್ನು ಪನೋರಮಾಕ್ಕೆ ಸೆಲೆಕ್ಟ್ ಮಾಡಿದ್ದರೂ ಕೂಡ ಅವುಗಳಿಗೆ ಥಿಯೇಟರ್‌ಗಳು ಸಿಗುವುದಿಲ್ಲ. ಆದ್ದರಿಂದ ಸಬ್ಸಿಡಿಯ ಉದ್ದೇಶ ಬೇರೆ. ಚಿತ್ರಗಳು ನಡೆದರೆ ಮಾತ್ರ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಸಿಗುತ್ತದೆ. ಇದರ ಬಗ್ಗೆ ವಿಚಾರ ಮಾಡಿ. ಚಿತ್ರಗಳು ನಡೆದರೆ ಟ್ಯಾಕ್ಸ್ ವಿನಾಯಿತಿ ಕೊಟ್ಟಿದ್ದಕ್ಕೂ ಸಾರ್ಥಕವಾಗುತ್ತದೆ. ಇಲ್ಲದಿದ್ದರೆ ಬಾಕಿ ಚಿತ್ರಗಳು ಏನು ಮಾಡಬೇಕು? ಯಾರು ಧೈರ್ಯ ಮಾಡುತ್ತಾರೆ? ಆದ್ದರಿಂದ ಸಬ್ಸಿಡಿಯನ್ನು ಕೊಡಲೇಬೇಕಾಗುತ್ತದೆ. ಎಂಟರ್‌ಟೇನ್‌ಮೆಂಟ್ ಟ್ಯಾಕ್ಸ್ ಬಗ್ಗೆ ಏನು ಮಾಡಿಫೈ ಮಾಡಬೇಕು, ರ್‍ಯಾಶನಲೈಸ್ ಮಾಡಬೇಕು ಎನ್ನುವುದು ಅದು ಪ್ರತ್ಯೇಕ. ಆದರೆ ಅದನ್ನು ಸಬ್ಸಿಡಿಗೆ ಹೋಲಿಸಬೇಡಿ.

ಶ್ರೀ ಎಂ. ಸಿ. ನಾಣಯ್ಯ : ಈ ಸಬ್ಸಿಡಿ ಕೊಡುವುದರ ಬಗ್ಗೆ ಸರ್ಕಾರ ಒಂದು ನೀತಿಯನ್ನು ಈಗಾಗಲೇ ಪ್ರಕಟ ಮಾಡಿದೆ. ಈ ಕ್ವಾಲಿಟಿ ಎಂದು ಹೇಳುತ್ತಾ ಇರತಕ್ಕಂಥಾದ್ದರ ಬಗ್ಗೆ ಕೂಡ ಇನ್ನೂ ಚಿಂತನೆ ಇದೆ. ಕ್ವಾಲಿಟಿ ಫಿಲ್ಮ್ಸ್, ನಾನ್ ಕ್ವಾಲಿಟಿ ಫಿಲ್ಮ್ಸ್ ಎಂದು ಹೇಳುತ್ತಾ ಇರತಕ್ಕಂಥಾದ್ದು, ಬಹುಶಃ ಇದರಲ್ಲಿ ಯಾರ ರೂಪರೇಷೆಗಳು, ಮಾನದಂಡಗಳು ಯಾವುದು ಎನ್ನುವಂಥಾದ್ದು. 80 ಚಿತ್ರಗಳನ್ನು ಮಾಡಿ ಬಹುಶಃ ಕ್ವಾಲಿಟಿ ಫಿಲ್ಮ್ಸ್ ಎನ್ನತಕ್ಕದ್ದು ವರ್ಷಕ್ಕೆ ಮೂರು-ನಾಲ್ಕು ಬರಬಹುದು. ಅದಕ್ಕಿಂತ ಹೆಚ್ಚು ಬರಲಿಕ್ಕಿಲ್ಲ. ಅಥವಾ ಒಂದು ಹತ್ತು ಅಂತಇಟ್ಟುಕೊಳ್ಳಬಹುದು. ಬಹುಶಃ ನೀವು ಎಲ್ಲಿಯಾದರೂ ಮಾನದಂಡ ಹಾಕಿ ಒಂದು ಸಮಿತಿ ಮಾಡಿದರೆ 80ರಲ್ಲಿ 75 ಕ್ವಾಲಿಟಿ ಫಿಲ್ಮ್ಸ್ ಬರಲಿಕ್ಕೂ ಸಾಕು. ಅದು ಗೊತ್ತಿದೆ ನಮಗೆ ಯಾವರೀತಿ ನಡೆಯುತ್ತದೆ ಎಂದು. ಬಹುಶಃ ಇದರ ಬಗ್ಗೆ ವಿಚಾರ ಮಾಡೋಣ. ನಾವು ಈಗ ಈ ತಿದ್ದುಪಡಿಯನ್ನು ತಂದಿದ್ದೇವೆ. ಅದಕ್ಕೆ ತಮ್ಮ ಸಮ್ಮತಿಯನ್ನು ಕೊಡಿ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ, 'ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1997ನೇ ಸಾಲಿನ ಕರ್ನಾಟಕ ಸಿನಿಮಾಗಳ (ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಉಪಾಧ್ಯಕ್ಷರು : 'ಖಂಡ 2 ರಿಂದ 3ವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ'.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 3ವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ - 'ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ಸಿ. ನಾಣಯ್ಯ : (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ 'ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1997ನೇ ಸಾಲಿನ ಕರ್ನಾಟಕ ಸಿನಿಮಾಗಳ (ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ -

'ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ '1997ನೇ ಸಾಲಿನ ಕರ್ನಾಟಕ ಸಿನಿಮಾಗಳ (ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

5.50 ಪಿ.ಎಂ

ಉಪಾಧ್ಯಕ್ಷರು : ಈಗ ಕರ್ನಾಟಕ ಅರಣ್ಯ ಮತ್ತು ಕೆಲವು ಇತರ ಕಾನೂನುಗಳ ತಿದ್ದುಪಡಿ ವಿಧೇಯಕ 1997.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಇದು ನಾಗಮಾರಪಲ್ಲಿಯವರ ಬಿಲ್, ಈಗ ಮಂಜುನಾಥ್‌ರವರು ಇದನ್ನು ಒಪ್ಪಿಕೊಳ್ಳುತ್ತಾರೋ ಹೇಗೋ ಎಂಬುದು ಗೊತ್ತಾಗಬೇಕು. ಇದು ಲೋಕಶಕ್ತಿ ಬಿಲ್ ಇದೆ.

ಕರ್ನಾಟಕ ಅರಣ್ಯ ಮತ್ತು ಕೆಲವು ಇತರ ಕಾನೂನುಗಳ ತಿದ್ದುಪಡಿ ವಿಧೇಯಕ, 1997

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ರ ಕರ್ನಾಟಕ ಅರಣ್ಯ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.